

# ಕರ್ನಾಟಕ ರಂಗ ಪರಂಪರೆ

ಹಕ್ಕಿ ನೋಟ



ಡಾ॥ ರಾಜ್‌ಕುಮಾರ್ ಹಾಗೂ ಭಟ್ಟಿ ಮಹದೇವಪ್ಪ



# ಕರ್ನಾಟಕ ರಂಗ ಪರಂಪರೆ

## ಹಕ್ಕಿ ನೋಟ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 560002

Published by
**B Manjunath Aradhya**

Register
Karnataka Nataka Academy

First Edition: 2017
Pages: 56
Copies: 500

Information Collection - Written by
**N Jagannath Prakash**
**Pragathi Ashwathnarayana Nesara**

Pixs

Coverpage & Inner Page
**Flowergrafic, Bengaluru**

Printed by
**Rashmi Printers**
Bengaluru 560027

ಪ್ರಕಾಶಕರು
**ಬಿ. ಮಂಜುನಾಥ ಅರಾಧ್ಯ**
ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ

ಪ್ರಥಮ ಮುದ್ರಣ : 2017
ಪುಟಗಳು : 56
ಪ್ರತಿಗಳು : 500

ಮಾಹಿತಿ ಸಂಗ್ರಹ – ಬರಹ
**ಎನ್. ಜಗನ್ನಾಥ್ ಪ್ರಕಾಶ್**
**ಪ್ರಗತಿ ಅಶ್ವಥನಾರಾಯಣ ನೇಸರ**

ಫೋಟೊಗಳು

ಮುಖಪುಟ ಮತ್ತು ಒಳಪುಟ ವಿನ್ಯಾಸ
**ಫ್ಲವರ್‌ಗ್ರಾಫಿಕ್, ಬೆಂಗಳೂರು**

ಮುದ್ರಣ
**ರಶ್ಮಿ ಪ್ರಿಂಟರ್ಸ್**
ಬೆಂಗಳೂರು 560027



# ಆಶಯ ನುಡಿ

ಕನ್ನಡ ನಾಡಿನಲ್ಲಿ ರಂಗಚಳುವಳಿಗಳು ಸ್ವಾತಂತ್ರ್ಯ ಹೋರಾಟಕ್ಕೂ ತನ್ನ ಕೊಡುಗೆಯನ್ನಿತ್ತಿದೆ. ಜನಜಾಗೃತಿಯ ಸಾಧನವಾಗಿ ಬೀದಿ ನಾಟಕಗಳು ಮತ್ತು ಚಳುವಳಿಗಳು ಪ್ರಧಾನವಾಗಿ ಹಲವು ಸಾಮಾಜಿಕ ಪರಿವರ್ತನೆಗಳಿಗೆ ಕೂಡ ಕಾರಣವಾಗಿವೆ.

ರಂಗಭೂಮಿಯಲ್ಲಿ ಹಲವು ಪ್ರಕಾರಗಳ ಕಲೆಗಳು ಅರಳಿವೆಯಾದರೂ, ರಂಗಭೂಮಿ ಎಂದಾಕ್ಷಣ ಪ್ರಮುಖವಾಗಿ ಮನಸ್ಸಿಗೆ ಬರುವುದು ನಾಟಕಗಳೇ. ವೃತ್ತಿಯಾಗಿ ಸ್ವೀಕರಿಸಿ ಬದುಕೆಲ್ಲ ರಂಗದ ಸುತ್ತಲೇ ಬದುಕನ್ನು ಕಟ್ಟಿಕೊಂಡ ಕಲಾವಿದರ ಬದುಕುಗಳೇ ಇನ್ನೊಂದು ಕತೆಯಾಗಬಲ್ಲಷ್ಟು ಅನುಭವಗಳ ಮೂಟೆ.

ಕಾಲೇಜು ವಿದ್ಯಾರ್ಥಿಗಳು, ಸಾಮಾಜಿಕ ಬದುಕಿನಲ್ಲಿ ಹಲವು ವೃತ್ತಿಗಳಲ್ಲಿ ತೊಡಗಿರುವ ಜನಪದರು ತಂತಮ್ಮ ಬಿಡುವಿನ ಕಾಲದಲ್ಲಿ ರಂಗಭೂಮಿ ಚಟುವಟಿಕೆಗಳಲ್ಲಿ ತೊಡಗಿಕೊಂಡು ಕಟ್ಟಿದ ಹವ್ಯಾಸಿ ರಂಗಭೂಮಿ ಕಾರ್ಯಗಳು ಸಾಮಾಜಿಕ ಬದುಕನ್ನು ಪ್ರಭಾವಿಸಿದೆ. ಹಳ್ಳಿಗರು ತಂತಮ್ಮ ಬಿಡುವಿನ ಸಮಯದಲ್ಲಿ ಒಗ್ಗೂಡಿ ನಾಟಕ ತರಬೇತಿ ನೀಡಬಲ್ಲ ಶಿಕ್ಷಕರ ನೇತೃತ್ವದಲ್ಲಿ ಪೌರಾಣಿಕ ನಾಟಕಗಳನ್ನು ಮಾಡುವುದು ಆಯಾ ಪ್ರದೇಶಗಳ ಸಾಂಸ್ಕೃತಿಕ ಏಕತೆಯ ಬಂಧವಾಗಿಯೂ ನೆಲೆ ನಿಂತಿದೆ.

ಇಂದು ಸಿನೆಮಾ ಮತ್ತು ಟಿವಿ ಚಾನೆಲ್ಲುಗಳಿಗೆ ಕಲಾವಿದರು ದೊರಕುವ ಮುಖ್ಯ ಮಾಧ್ಯಮವೇ ರಂಗಭೂಮಿ. ನಾಟಕ ತರಬೇತಿ ನೀಡುವ ಹಲವು ಸಂಸ್ಥೆಗಳು ಇಂದು ರಾಷ್ಟ್ರಾದ್ಯಂತ ಪದವಿ ಕೋರ್ಸುಗಳನ್ನು ನಡೆಸುತ್ತಿವೆ. ರಂಗಾಯಣದಂತಹ ರೆಪರ್ಟರಿಗಳನ್ನು ಸರ್ಕಾರವೇ ಅತ್ಯಂತ ಪರಿಣಾಮಕಾರಿಯಾಗಿ ನಡೆಸುತ್ತಿದೆ. ನಾಟಕ ತಂಡಗಳು ನಡೆಸುವ ಸಂಸ್ಥೆಗಳಿಗೆ ಆರ್ಥಿಕ ಸಹಾಯವನ್ನು ನೀಡಲಾಗುತ್ತಿದೆ. ಜೀವನಸಂಧ್ಯಾ ಕಾಲದಲ್ಲಿ ಇರುವ ಕಲಾವಿದರಿಗೆ ಮಾಸಾಶನ ಮತ್ತಿತರ ನೆರವು ನೀಡಲಾಗುತ್ತಿದೆ.

ಇಚಿತಹ ಬಹುಮುಖೀ ರಂಗಭೂಮಿಗೆ ವಿಶ್ವಾದ್ಯಂತ ವಿಶ್ವ ರಂಗಭೂಮಿ ದಿನವನ್ನು ಆಚರಿಸಲಾಗುತ್ತದೆ. ಈ ಸಂದರ್ಭದಲ್ಲಿ ಕನ್ನಡ ರಂಗಭೂಮಿ ಸುವರ್ಣ ಪರಂಪರೆಯನ್ನು ನೆನಪಿಸಿಕೊಂಡು ನಮ್ಮ ನುಡಿ ಗೌರವ ಸಲ್ಲಿಸುವ ಸಲುವಾಗಿ ಈ ಕೃತಿಯನ್ನು ಹೊರತರಲಾಗುತ್ತಿದೆ. ಈ ಕೃತಿಯು ಆಸಕ್ತರಿಗೆ ಕನ್ನಡ ರಂಗಭೂಮಿಯ ಕೈಪಿಡಿಯಾಗಿ ನೆರವಾಗಲಿ ಎಂದು ಆಶಿಸುತ್ತೇವೆ.

**ಉಮಾಶ್ರೀ**
ಕನ್ನಡ–ಸಂಸ್ಕೃತಿ, ಮಹಿಳಾ–ಮಕ್ಕಳ ಕಲ್ಯಾಣ,
ಹಿರಿಯ ನಾಗರಿಕರ ವಿಕಲಚೇತನರ ಸಬಲೀಕರಣ ಸಚಿವರು

# ವಿಶ್ವ ರಂಗಭೂಮಿ ದಿನ



## ಶುಭ ಹಾರೈಕೆ

**"ಕಾವ್ಯೇಶು ನಾಟಕಂ ರಮ್ಯಂ"** ಎಂಬ ಕವಿ ಕಾಳಿದಾಸನ ನುಡಿಗಟ್ಟು ಸೃಜನಶೀಲ ಸಾಹಿತ್ಯ ಪ್ರಕಾರಗಳಲ್ಲಿ ನಾಟಕದ ಮಹತ್ವವನ್ನು ಗುರುತಿಸುತ್ತದೆ. ಇಂದಿನ ದಿನಮಾನದಲ್ಲಿ ಕಿರುತೆರೆ ಮತ್ತು ಹಿರಿತೆರೆ ಎಂಬ ಹಲವು ಆಯಾಮಗಳಲ್ಲಿ ವಿಕಾಸಗೊಂಡ ರಂಗಪರಂಪರೆಯ ಮೂಲಸ್ತೋತ್ರ ರಂಗಭೂಮಿಯದೇ ಆಗಿದೆ.

ವೃತ್ತಿ ರಂಗಭೂಮಿ ಪ್ರಕಾರದಲ್ಲಿ ರಂಗ ಚಟುವಟಿಕೆಯೇ ಬದುಕಾಗಿ ರೂಪಿಸಿಕೊಂಡ ಕಲಾವಿದರು ನಿರಂತರ ಕ್ಯಾಂಪ್‌ಗಳನ್ನು ರಚಿಸಿ, ಊರಿಂದೂರಿಗೆ ತಿರುಗುತ್ತ ನಾಟಕ ಪ್ರದರ್ಶನ ಮಾಡುತ್ತ ಜನರಿಗೆ ಮನರಂಜನಾ ಮಾಧ್ಯಮವಾಗಿ ಸಾಂಸ್ಕೃತಿಕ ಚಳುವಳಿಯ ಭಾಗವಾದವರು.

ನಾಟಕ, ಯಕ್ಷಗಾನ, ದೊಡ್ಡಾಟ, ಸಣ್ಣಾಟಗಳಂತಹ ಹಲವು ಪ್ರಕಾರಗಳಲ್ಲಿ ಹಲವು ಕಲಾವಿದರು ಪೌರಾಣಿಕ ವಸ್ತುವಿಷಯಗಳನ್ನು ಪ್ರತಿಪಾದಿಸಿ ಸಾಮಾಜಿಕ ಮೌಲ್ಯಗಳನ್ನು ತೋರಿಸಿಕೊಡುವ ಮಹತ್ವದ ಸಾಂಸ್ಕೃತಿಕ ಚಳುವಳಿಯನ್ನು ಜತನವಾಗಿರಿಸಿದ್ದಾರೆ. ಆಧುನಿಕ ದಿನಮಾನದಲ್ಲಿ ವಿದ್ಯಾರ್ಥಿಗಳು, ಹವ್ಯಾಸಿ ಕಲಾವಿದರು ಸಮಕಾಲೀನ ಸಾಮಾಜಿಕ ಸಮಸ್ಯೆಗಳನ್ನು ಮತ್ತು ಅವುಗಳ ಪರಿಹಾರೋಪಾಯಗಳನ್ನು ತಿಳಿಸಿಕೊಡುವ ಹಲವು ನಾಟಕಗಳನ್ನು ರಚಿಸಿ ಪ್ರದರ್ಶಿಸಿದ್ದಾರೆ.

ವಿಶ್ವದೆಲ್ಲೆಡೆ ರಂಗಭೂಮಿ ಜಗತ್ತಿನಾದ್ಯಂತ ಮನೋರಂಜನಾ ಮಾಧ್ಯಮವಾಗಿ, ಜ್ಞಾನಪ್ರಸಾರದ ಮತ್ತು ಸಾಮಾಜಿಕ ಚಳುವಳಿಯ ವೇದಿಕೆಯಾಗಿ ಸಮಾಜದ ಬದುಕನ್ನು ಪ್ರಭಾವಿಸಿದೆ. ಇಂತಹ ಚಳುವಳಿಯ ಸ್ಮರಣೆಯಾಗಿ ವಿಶಿಷ್ಟ ದಿನವನ್ನು ರೂಪಿಸಿ ಪ್ರತಿ ವರ್ಷ ಮಾರ್ಚ್ 27ರಂದು ವಿಶ್ವ ರಂಗಭೂಮಿ ದಿನವಾಗಿ ಆಚರಿಸಲಾಗುತ್ತಿದೆ.

ಇಂತಹ ವಿಶಿಷ್ಟ ದಿನದಂದು ಕನ್ನಡ ರಂಗ ಪರಂಪರೆಯ ಮಹಾನ್ ಚೇತನಗಳನ್ನು ಸ್ಮರಿಸಲು ಈ ಹೊತ್ತಿಗೆಯನ್ನು ಪ್ರಕಟಿಸಲಾಗಿದೆ. ಇದನ್ನು ಚಂದವಾಗಿ ರೂಪಿಸಿಕೊಟ್ಟ ಶ್ರೀ ಎನ್.ಜಗನ್ನಾಥ ಪ್ರಕಾಶ ಅವರಿಗೆ ಮತ್ತು ಅಂದವಾಗಿ ಮುದ್ರಿಸಿಕೊಟ್ಟ ರಶ್ಮಿ ಪ್ರಿಂಟರ್ಸ್ ಸಂಸ್ಥೆಯವರಿಗೂ ಧನ್ಯವಾದಗಳು. ಕನ್ನಡ ರಂಗಭೂಮಿಯ ಪರಿಚಯ ಮಾಡಿಕೊಳ್ಳುವ ಆಸಕ್ತರಿಗಾಗಿ ಈ ಹೊತ್ತಿಗೆ ಉಪಯುಕ್ತ ಆಕರವಾಗಿರಲಿ ಎಂದು ಹಾರೈಸುತ್ತೇನೆ.

**ಕೆ.ಎ.ದಯಾನಂದ,** ಕ.ಆ.ಸೇ
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ



ಕೊಟ್ಟೂರಪ್ಪ

# ಕರ್ನಾಟಕ ರಂಗ ಪರಂಪರೆ ಹಕ್ಕಿ ನೋಟ



ಎಂ.ವಿ. ಸುಬ್ಬಯ್ಯನಾಯ್ಡು

ರಂಗಭೂಮಿ ಕಲೆ ಪುರಾತನಕಾಲದಿಂದಲೂ ಜನತೆಯ ಕಲಾಭಿವ್ಯಕ್ತಿಯ ಒಂದು ಮುಖ್ಯ ಪ್ರಕಾರ. ಕನ್ನಡ ನಾಟಕ ಸಾಹಿತ್ಯದ ಪ್ರಾಚೀನತೆಯನ್ನು ಗಮನಿಸಿದರೆ ನಾಟಕ, ನಾಟಕಶಾಲೆ, ನಟ, ನಾಟಕಾಭಿನಯ ಮೊದಲಾದ ಶಬ್ದಗಳು ಅಲ್ಲಲ್ಲಿ ಕಾಣಸಿಗುತ್ತವೆ. ಕನ್ನಡದಲ್ಲಿ ಶಿಷ್ಟ ನಾಟಕ ಸಾಹಿತ್ಯ ಇತಿಹಾಸ 17ನೇ ಶತಮಾನದಿಂದ ಪ್ರಾರಂಭವಾಗಿದೆ. ಇದು 'ಮಿತ್ರವಿಂದಾ ಗೋವಿಂದ' ನಾಟಕ ಸಿಂಗರಾರ್ಯರಿಂದ ರಚನೆಗೊಂಡ ನಂತರ.

ಆರಂಭ ಕಾಲದಲ್ಲಿ ರಂಗಭೂಮಿಗೆ ಆಶ್ರಯಕೊಟ್ಟಿದ್ದು ರಾಜಮಹಾರಾಜರ ಆಸ್ಥಾನಗಳು. ಅನೇಕ ರಾಜವಂಶಗಳು ನಾಟಕಗಳೂ ಸೇರಿದಂತೆ ಕಲೆ–ಸಾಹಿತ್ಯ–ಸಂಗೀತಕ್ಕೆ ಪ್ರೋತ್ಸಾಹ ನೀಡುತ್ತಿದ್ದವು. ಅನೇಕ ಶಾಸನಗಳಲ್ಲಿ ನಾಟಕ–ನಾಟಕ ಶಾಲೆಯ ಉಲ್ಲೇಖಗಳಿವೆ. ಹಲವು ಸಾಹಿತ್ಯಕೃತಿಗಳಲ್ಲಿ ನಾಟಕಶಾಲೆಯ ಕುರಿತು ವರ್ಣನೆಗಳೂ ಇವೆ. ಪಂಪನ ಆದಿಪುರಾಣದಲ್ಲಿ ನೀಲಾಂಜನೆಯ ನೃತ್ಯ ನಾಟಕ – ರನ್ನನ ಅಜಿತ ಪುರಾಣದಲ್ಲಿ ಐಂದ್ರನಾಟಕ ವಿಧಿ ಪ್ರಸ್ತಾಪಗಳನ್ನು ಕಾಣಬಹುದು.

ಕವಿರಾಜ ಮಾರ್ಗದಲ್ಲಿ ಕೂಡ ನಾಟಕಗಳನ್ನು ಕುರಿತ ಪ್ರಸ್ತಾಪಗಳಿದ್ದು ಬಹು ಹಿಂದಿನಿಂದಲೂ ಈ ನಾಡಿನಲ್ಲಿ ನಾಟಕರಂಗದ ಅಸ್ತಿತ್ವವಿತ್ತೆಂಬುದಕ್ಕೆ ಪುರಾವೆಗಳನ್ನು ಒದಗಿಸುತ್ತವೆ.

ಸಂಸ್ಕೃತ–ಕನ್ನಡ ನಾಟಕಗಳು ಇಲ್ಲಿ ಪ್ರಯೋಗಗಳನ್ನು ಕಾಣುತ್ತಿದ್ದು ಇವುಗಳಲ್ಲಿ ಬಹಳಷ್ಟು ರಾಜಾಶ್ರಯ ಪಡೆದಿದ್ದು 19ನೇ ಶತಮಾನದ ಕೊನೆಯ ದಶಕದಲ್ಲಿ ಕನ್ನಡ ರಂಗಭೂಮಿ ಹೊಸಮಜಲು ಕಂಡುಕೊಳ್ಳಲು ಸಾಧ್ಯವಾಯಿತು. ಆಸ್ಥಾನ ರಂಗಭೂಮಿಗಿಂತ ಭಿನ್ನವಾದ ರಂಗ ಚಟುವಟಿಕೆಗಳು ಕಾಣಿಸಿಕೊಂಡು ಅದೊಂದು ವೃತ್ತಿಪರವಾದ ರಂಗಭೂಮಿ ಪ್ರಕಾರ ಅಸ್ತಿತ್ವಕ್ಕೆ ಬಂದಿತು.

ದೇವಾನುದೇವತೆಗಳ ಆರಾಧನೆ, ಸಮಾಜದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ತಿಳಿಸುವ ನೀತಿಬೋಧೆ ಇರುವ ಕಥಾವಸ್ತುಗಳನ್ನು ಆಯ್ಕೆ ಮಾಡಿಕೊಂಡ ರಂಗಭೂಮಿ ಒಂದೆಡೆಯಾದರೆ ಕಲಾಪ್ರೌಢಿಮೆ ಕಲಾಪ್ರತಿಷ್ಠೆಗಳಿಂದ ಆಸ್ಥಾನಕ್ಕೆ ಪೂರಕವಾದ ರಂಗಭೂಮಿ ಇನ್ನೊಂದು ಕಡೆ ಇತ್ತು. ಇವೆರಡು ರಂಗಭೂಮಿ ವಿಧಗಳಿಗಿಂತ ಬೇರೆಯದಾದ ಇನ್ನೊಂದು ಬಗೆಯ ರಂಗಭೂಮಿ ಹುಟ್ಟಿತು. ಇದನ್ನು ವೃತ್ತಿ ರಂಗಭೂಮಿ ಎಂದು ಕರೆಯಲಾಯಿತು.





ಎ.ವಿ. ವರದಾಚಾರ್



ಗುರುಮಾರ್ತಪ್ಪ







ಮಧ್ಯಮವರ್ಗದ ಜನತೆಗೆ ಮನರಂಜನೆ ಒದಗಿಸಿ ಹಣ ಸಂಪಾದನೆ ಮಾಡುವ ಮೂಲಕ ಬದುಕನ್ನು ಕಟ್ಟಿಕೊಳ್ಳುವ ಹಾದಿ ಈ ವೃತ್ತಿ ರಂಗಭೂಮಿಯದು. ವಾಣಿಜ್ಯ ಉದ್ದೇಶಗಳನ್ನು ಅಳವಡಿಸಿಕೊಳ್ಳುವಾಗ ಪ್ರೇಕ್ಷಕರ ನಿರೀಕ್ಷೆಗಳನ್ನು ಗಮನಿಸಬೇಕಾದುದು ಅನಿವಾರ್ಯ. ಹೀಗಂತಲೇ ಜನತೆಯನ್ನು ರಂಜಿಸುವುದಕ್ಕಾಗಿ ರಂಗಭೂಮಿ ಅನೇಕ ಬದಲಾವಣೆಗಳಿಗೆ ತನ್ನನ್ನು ಒಡ್ಡಿಕೊಂಡಿತು. ಅದರಲ್ಲಿ ವಿಭಿನ್ನವಾದ ಕಥಾವಸ್ತು ಇತ್ತು. ಪ್ರಯೋಗ ತಂತ್ರಗಳೂ ಬದಲಾದವು. ಸೂಕ್ತವಾದ ರೀತಿಯಲ್ಲಿ ನಿರೂಪಣಾ ಶೈಲಿ ಬಂತು. ಸಂಗೀತದಲ್ಲಿ ಹೊಸತನ, ವೇಷಭೂಷಣಗಳಲ್ಲಿ ಭಿನ್ನತೆ ಕಂಡಿತು. ರಂಗಸಜ್ಜಿಕೆಯಲ್ಲಿ ವೈವಿಧ್ಯತೆ ಕಾಣಿಸಿತು.

ಆಸ್ಥಾನ ನಾಟಕಗಳು ಒಂದೇ ಊರಿಗೆ, ಸ್ಥಳಕ್ಕೆ ಸೀಮಿತವಾಗಿದ್ದರೆ ವೃತ್ತಿ ನಾಟಕ ಕಂಪನಿಗಳು ಊರಿಂದ ಊರಿಗೆ ಸಂಚರಿಸುವ ಪ್ರವೃತ್ತಿ ಇಟ್ಟುಕೊಂಡವು. ನಟನೆಯನ್ನೆ ವೃತ್ತಿ ಮಾಡಿಕೊಂಡ ಕಲಾವಿದರ ಆಗಮನವಾಯಿತು. ನಾಟಕ ಏರ್ಪಡಿಸುವ ಜಾಗಗಳಲ್ಲಿ ತಾತ್ಕಾಲಿಕ ರಂಗ ಮಂದಿರಗಳನ್ನು ಕಟ್ಟುವ ಪರಿಪಾಠ ಕೂಡ ಶುರುವಾಯಿತು. ರಂಗಮಂಚದಲ್ಲಿ ನಾವೀನ್ಯತೆ ಕಾಣಿಸಿಕೊಂಡಿತು. ಜಾತ್ರೆಗಳಲ್ಲಿ ಇಂತಹ ಕಂಪನಿಗಳು ಮೊಕ್ಕಾಂ ಹೂಡುವುದು ಪ್ರಾರಂಭವಾಗಿದ್ದೇ ಈ ಕಾಲಘಟ್ಟದಲ್ಲಿ.

ಕನ್ನಡ ನಾಡಿನಲ್ಲಿ ವೃತ್ತಿ ನಾಟಕ ಕಂಪನಿಗಳ ಆರಂಭಕ್ಕೆ ಆಗ ಭಾರತದ ಅಧಿಕಾರ ಹಿಡಿದಿದ್ದ ಬ್ರಿಟಿಷ್ ಸರ್ಕಾರ ಮುಖ್ಯಕಾರಣ. ಯುರೋಪ್‌ನಲ್ಲಿ ವೃತ್ತಿ ನಾಟಕ ಕಂಪನಿಗಳು 18ನೇ ಶತಮಾನದಲ್ಲಿಯೇ ತಲೆ ಎತ್ತಿದ್ದವು. ಬಿಳಿಯರ ಆಡಳಿತವಿದ್ದ ಭಾರತಕ್ಕೆ 1775ರಲ್ಲಿ ವಿದೇಶಿ ವೃತ್ತಿನಾಟಕ ಕಂಪನಿ ಕಾಲಿಟ್ಟವು. ಆಗ ಕಲ್ಕತ್ತೆ ಭಾರತದ ರಾಜಧಾನಿ. ಬ್ರಿಟೀಷ್ ಅಧಿಕಾರಿಗಳು ಕಲ್ಕತ್ತಾದಲ್ಲಿದ್ದ ವ್ಯಾಪಾರಸ್ಥರು ಆಂಗ್ಲ ನಾಟಕಗಳನ್ನು ಆಗಾಗ ಅಭಿನಯಿಸುತ್ತಿದ್ದರು. ಆಗ ಇಂಗ್ಲೆಂಡ್‌ನಲ್ಲಿ ಪ್ರಸಿದ್ಧವಾಗಿದ್ದ ನಾಟಕ ಕಂಪನಿಗಳನ್ನು ಭಾರತಕ್ಕೆ ಪ್ರದರ್ಶನಕ್ಕಾಗಿ ಆಹ್ವಾನ ನೀಡಿದ್ದರಿಂದ ವೃತ್ತಿ ಕಂಪನಿಗಳು ಇಲ್ಲಿಗೆ ಬಂದು ಹೋಗತೊಡಗಿದ್ದವು.


ಎ.ವಿ. ವರದಾಚಾರ್

ಸಿಮ್ಲಾ, ಮುಂಬೈ, ಕಲ್ಕತ್ತಾಗಳಲ್ಲಿ ವಿದೇಶಿ ನಾಟಕ ಕಂಪನಿಗಳು ನಾಟಕ ಪ್ರದರ್ಶನ ನೀಡಲು ಶುರುವಿಟ್ಟುಕೊಂಡಾಗ ಬಂಗಾಲದ ರಂಗಭೂಮಿ ಮೇಲೆ ಮಹತ್ತರ ಪರಿಣಾಮ ಕಾಣಿಸಿಕೊಂಡವು. ಬಂಗಾಲ ರಂಗಭೂಮಿ ಆಂಗ್ಲ ನಾಟಕ ಕಂಪನಿಗಳ ರೀತಿರಿವಾಜುಗಳನ್ನು ಅನುಕರಿಸಲು ಆರಂಭಿಸಿದವು. ಕಲ್ಕತ್ತಾದಲ್ಲಿ ಕಾಣಿಸಿಕೊಂಡ ಅನುಕರಿಸುವ ಪ್ರವೃತ್ತಿ ಬೊಂಬಾಯಿಗೂ ಹರಡಲು ತಡವಾಗಲಿಲ್ಲ.




ಬ್ರಿಟಿಷರು ಬೊಂಬಾಯಿ ಭಾಗದಲ್ಲಿ ಪಾರ್ಸಿಗಳಿಗೆ ನಾಟಕ ಕಂಪನಿಗಳನ್ನು ಕಟ್ಟಲು ಪ್ರೋತ್ಸಾಹ ಕೊಟ್ಟರು. ಪಾರ್ಸಿ ನಾಟಕ ಕಂಪನಿಗಳು ಆಂಗ್ಲ ಮಾದರಿಗಳನ್ನೇ ಅನುಸರಿಸುತ್ತಿದ್ದವು.


ಭಾರತೀಯ ಸಂಸ್ಕೃತಿ ಮೇಲೆ ಇಂಗ್ಲಿಷ್ ನಾಟಕಗಳ ಪ್ರಭಾವ ಆ ಸಂದರ್ಭದಲ್ಲಿ ಅಪಾಯಕಾರಿ ಘಟನೆ ಆಗಿರುವುದನ್ನು ಮನಗಂಡ ಗುರುದೇವ ರವೀಂದ್ರನಾಥ ಠ್ಯಾಗೋರ್, ಮಹಾರಾಷ್ಟ್ರದಲ್ಲಿ ವಿಷ್ಣುಪಂತ್ ಭಾವೆ ಮೊದಲಾದವರು ಬ್ರಿಟಿಷ್ ಸಾಂಸ್ಕೃತಿಕ ದಾಳಿ ಎದುರಿಸಲು ಮುಂದಡಿ ಇಟ್ಟರು.



ಮಳವಳ್ಳಿ ಸುಂದರಮ್ಮ

ಆವರಿಗೆ ದೊಂದಿಗಳ ಬೆಳಕಿನಲ್ಲಿಯೇ ನೋಡಬೇಕಿದ್ದ ನಾಟಕಗಳಿಗೆ ಗ್ಯಾಸ್ ಲೈಟ್ ಬಳಕೆ ಆರಂಭಗೊಂಡಿತು. ಬಗೆಬಗೆಯ ಪರದೆಗಳು ಕಾಣಿಸಿಕೊಂಡವು. ಬಣ್ಣಬಣ್ಣದ ದೃಶ್ಯಗಳು ರಂಗದಲ್ಲಿ ಕಾಣತೊಡಗಿದವು. ನೃತ್ಯಗಾಯನಗಳು ಜನರನ್ನು ಮೋಡಿಮಾಡಲು ನೆರವಾದವು. ಭಾಷೆ ಯಾವುದಾದರೇನು ನೋಡಲು ಚೆಂದವಾಗಿದೆ ಎಂಬ ಅಭಿಪ್ರಾಯ ಮೂಡಿದ್ದರ ಪರಿಣಾಮ ಎಲ್ಲಾ ವರ್ಗದ ಜನ ವಿಶೇಷವಾಗಿ ಮಧ್ಯಮ ವರ್ಗದ ಜನ ಇಂತಹ ನಾಟಕಗಳನ್ನು ನೋಡಿ ಆನಂದಿಸಿದರು.


















ಸಿ.ಬಿ. ಮಲ್ಲಪ್ಪ

ಈ ಹೊತ್ತಿಗಾಗಲೇ ಕನ್ನಡಿಗರು ಅತಂತ್ರರಾಗಿದ್ದರು. ಕನ್ನಡ ಮಾತಾಡುವ ಪ್ರದೇಶಗಳು ಬೇರೆ ಬೇರೆ ಆಡಳಿತಗಳಿಗೆ ಒಳಪಟ್ಟಿದ್ದವು. ಮರಾಠಿ, ನಿಜಾಂ, ಬ್ರಿಟಿಷ್ ಪ್ರಭಾವ ಕನ್ನಡ ಭಾಷೆ ಆಡುವ ಭಾಗಗಳ ಮೇಲೆ ಬಿದ್ದಿದ್ದವು.

ಉತ್ತರ ಕರ್ನಾಟಕದಲ್ಲಿ ಮರಾಠಿ ನಾಟಕ ಕಂಪನಿಗಳು ಹೆಚ್ಚಾಗಿ ಮೊಕ್ಕಾಂ ಹೂಡಿದವು. ಬೆಂಗಳೂರಿಗೆ ಪಾರ್ಸಿ ಕಂಪನಿಗಳು ಭೇಟಿಕೊಡಲು ಆರಂಭಿಸಿದವು. ಕನ್ನಡ ಸಂಸ್ಕೃತಿಯ ಮೇಲೆ ಇದೊಂದು ದೊಡ್ಡ ದಾಳಿ ಶುರುವಾಯಿತು.

ಆವರೆಗೂ ಉತ್ತರ ಕರ್ನಾಟಕದಲ್ಲಿ ಸಾಮಾನ್ಯ ಜನರ ಮನರಂಜನೆಗಳಾಗಿದ್ದ ಸಣ್ಣಾಟ, ದೊಡ್ಡಾಟಗಳು ಕ್ಷೀಣಿಸಿದ್ದವು. ನಮ್ಮದು ಎಂದು ಹೇಳಿಕೊಳ್ಳುವ ಕನ್ನಡ ಕಲೆ ಯಾವುದು ಇಲ್ಲವೇನೋ ಎಂಬ ಭಾವನೆ ಎಲ್ಲರನ್ನು ಆವರಿಸಿದ್ದ ಸಂದರ್ಭದಲ್ಲಿ 'ಗದಗ'ದಿಂದ ಒಂದು ಗಟ್ಟಿಧ್ವನಿ ಹೊರಟಿತು. ಅದೇ ಶ್ರೀ ವೀರನಾರಾಯಣ ಪ್ರಸಾದಿತ ಕೃತಪುರ (ಗದಗ) ನಾಟಕ ಮಂಡಲಿ.



ಕನ್ನಡ ಹಾಗೂ ಕನ್ನಡಿಗರ (ಅಸಹಾಯಕ) ಪರಿಸ್ಥಿತಿಯಲ್ಲಿ ಸಕ್ಕರಿ ಬಾಳಾಚಾರ್ಯರು (ಶಾಂತಕವಿಗಳು) ಕೆಲವು ಕನ್ನಡ ತರುಣರೊಂದಿಗೆ ಸ್ಥಾಪಿಸಿದ ಮಂಡಲಿ ಇದು. ಹತ್ತುಹಲವು ಭಾಗಗಳಲ್ಲಿ ಚದುರಿಹೋಗಿದ್ದ ಕನ್ನಡಿಗರ ಸ್ವಾಭಿಮಾನವನ್ನು ಎತ್ತಿಹಿಡಿಯುವ ಪ್ರಯತ್ನವಾಗಿ ಪ್ರಾರಂಭಗೊಂಡ ನಾಟಕ ಮಂಡಲಿ ಇದಾಗಿತ್ತು. (ಸ್ಥಾಪನೆ 1873)

ಉಷಾಪರಿಣಯದ ಕಥೆಯಾದ 'ಬಾಣಾಸುರ'ವನ್ನು ಶಾಂತಕವಿಗಳು ನಾಟಕವನ್ನಾಗಿಸಿದರು. ಉತ್ಸಾಹಿ ಯುವಕರ ಪಡೆ ನೂತನ ಬಗೆಯ ವೇಷಭೂಷಣ, ರಂಗ ಅಲಂಕಾರಗಳೊಂದಿಗೆ ನಾಟಕವನ್ನು ಪ್ರಯೋಗಿಸಲು ಆರಂಭಿಸಿದರು. ಇದರಿಂದ ಪ್ರೇರಣೆಗೊಂಡ ಹಲಸಂಗಿ (ಬೆಳಗಾವಿ ಜಿಲ್ಲೆ)ಯಲ್ಲಿ ಕನ್ನಡ ನಾಟಕ ಮಂಡಲಿ ಅಸ್ತಿತ್ವಕ್ಕೆ ಬಂದಿತು. ಜನ ಪರಿಚಿತವಾದ ಕಥಾವಸ್ತುಗಳನ್ನೇ ಆರಿಸಿದ ನಾಟಕಗಳನ್ನೂ ಮಂಡಲಿಗಳು ಉತ್ತರ ಕರ್ನಾಟಕದ ಉದ್ದಕ್ಕೂ ಪ್ರದರ್ಶನ ಮಾಡುತ್ತಿದ್ದರಿಂದ ಕನ್ನಡಿಗರಲ್ಲಿ ಮೂಡಿದ್ದ ಆತಂಕ ಸ್ವಲ್ಪ ಮಟ್ಟಿಗೆ ದೂರವಾಯಿತು.





ವ್ಯಕ್ತಿ ನೆಲೆಯಿಂದ ಸಮಷ್ಠಿ ಪ್ರಯತ್ನಕ್ಕೆ ನಾಂದಿಯಾದ ಉತ್ತರ ಕರ್ನಾಟಕದ ಕಂಪನಿಗಳು ಮೈಸೂರು ಭಾಗದಲ್ಲೂ ಸದ್ದು ಮಾಡಿದವು. ಇದರ ಫಲವಾಗಿ ಮೈಸೂರು ಆಳುತ್ತಿದ್ದ ಅರಸರೇ ಕನ್ನಡ ಕಂಪನಿ ನಾಟಕಕ್ಕೆ ಪ್ರೋತ್ಸಾಹಕೊಟ್ಟರು. ಕಲೆ, ಸಾಹಿತ್ಯ, ಸಂಗೀತಕ್ಕೆ ಯಾವಾಗಲೂ ಬೆಂಬಲಕ್ಕೆ ನಿಲ್ಲುತ್ತಿದ್ದ ಮೈಸೂರು ಅರಮನೆ 1881ರಲ್ಲಿ ಶ್ರೀ ಚಾಮರಾಜೇಂದ್ರ ನಾಟಕ ಸಭಾ ಎಂಬ ಸಂಸ್ಥೆಯನ್ನು ಸ್ಥಾಪಿಸಿತು. ಅರಮನೆ ಕಂಪನಿಯನ್ನು ಚೆನ್ನಾಗಿ ಕಟ್ಟಬೇಕೆಂಬ ಉದ್ದೇಶದಿಂದ ಮುಂಬೈನಿಂದಲೇ ನಾಟಕ ಪರಿಕರಗಳನ್ನು ತರಿಸಲಾಯಿತು.

ಮೈಸೂರಿನಲ್ಲಿ ಇದಕ್ಕೆ ಮೊದಲೇ ಅಸ್ತಿತ್ವಕ್ಕೆ ಬಂದಿದ್ದ ಶ್ರೀ ಶಾಕುಂತಲ ಕರ್ನಾಟಕ ನಾಟಕ ಮಂಡಲಿಯೂ ಅರಮನೆ ನಾಟಕ ಮಂಡಲಿಯಲ್ಲಿ ವಿಲೀನವಾಯಿತು. ಆಸ್ಥಾನ ವಿದ್ವಾಂಸರಾದ ಬಸವಪ್ಪ ಶಾಸ್ತ್ರಿಗಳು ಕಾಳಿದಾಸನ 'ಶಾಕುಂತಲ' ನಾಟಕವನ್ನು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದ ಮಾಡಿಕೊಟ್ಟರು.



ನುರಿತ ಕಲಾವಿದರು, ಸಂಗೀತ ಪರಿಣಿತರು, ಹೊಸದಾಗಿ ರೂಪುಗೊಂಡ ರಂಗವೇದಿಕೆ, ಬಗೆಬಗೆಯ ಪರದೆ, ಗ್ಯಾಸ್ ಲೈಟ್‌ಗಳ ನೆರವು ಎಲ್ಲವುಗಳೊಂದಿಗೆ ಅರಮನೆಯಲ್ಲಿ ನಾಟಕ ಪ್ರದರ್ಶನ ನಡೆದು ಹೊಸ ಶಕೆಯೊಂದು ಆರಂಭವಾಯಿತು.



ಒಚಿದರ ಹಿಂದೆ ಇನ್ನೊಂದರಂತೆ ಅರಮನೆ ನಾಟಕ ಮಂಡಲಿಯಿಂದ ನಾಟಕಗಳು ಪ್ರದರ್ಶನಗೊಂಡು ಕಲಾಸಕ್ತರ ಗಮನ ಸೆಳೆಯತೊಡಗಿದವು. ಇವುಗಳೆಲ್ಲವೂ ಸಂಸ್ಕೃತ ನಾಟಕಗಳ ಕನ್ನಡ ಅನುವಾದಗಳೇ ಆಗಿದ್ದವು. ಶಾಕುಂತಲ, ಮೃಚ್ಛಕಟಿಕ, ರತ್ನಾವಳಿ ನಾಟಕಗಳು ಹೆಚ್ಚು ಮೆಚ್ಚುಗೆ ಗಳಿಸಿ ಮತ್ತೆ ಮತ್ತೆ ಪ್ರದರ್ಶನಗೊಂಡವು.




ಸಂಸ್ಕೃತದಿಂದ ತರ್ಜುಮೆಗೊಳ್ಳುತ್ತಿದ್ದ ಕನ್ನಡ ನಾಟಕಗಳೊಂದಿಗೆ ಷೇಕ್ಸ್‌ಪಿಯರ್ ಇಂಗ್ಲೀಷ್ ನಾಟಕಗಳೂ ಕನ್ನಡಕ್ಕೆ ಬಂದವು, ಬಳಿಕ ಸ್ವತಂತ್ರ ಕನ್ನಡ ನಾಟಕಗಳೂ ರಚನೆಯಾದವು.

ಅರಮನೆ ನಾಟಕ ಮಂಡಲಿ ಸುಮಾರು ಮೂರು ದಶಕಗಳ ನಂತರ ಇಬ್ಭಾಗವಾಗಿ ಶಾಕುಂತಲ ನಾಟಕ ಮಂಡಲಿ ಹಾಗೂ ಶ್ರೀ ಚಾಮುಂಡೇಶ್ವರಿ ನಾಟಕ ಮಂಡಲಿಗಳೆಂದು ಕಾರ್ಯ ನಿರ್ವಹಿಸಿ ಮೈಸೂರು ಪ್ರಾಂತ್ಯದಲ್ಲಿ ಕನ್ನಡ ನಾಟಕಗಳನ್ನು ಪ್ರದರ್ಶಿಸಿ ಜನ ಮೆಚ್ಚುಗೆ ಗಳಿಸಿದವಲ್ಲದೆ ಕನ್ನಡ ರಂಗಭೂಮಿಗೆ ಅಪಾರ ಕಾಣಿಕೆ ನೀಡಿದವು.









ಗರೂಡ ಸದಾಶಿವರಾಯರು

ಮರಾಠಿ ನಾಟಕಗಳಿಗೆ ಸವಾಲಾಗಿ ಮೊದಲು ನಿಂತ ಉತ್ತರ ಕರ್ನಾಟಕದಲ್ಲಿ ಮರಾಠಿ ಪ್ರಭಾವ ಪೂರ್ತಿಯಾಗಿ ನಿಲ್ಲಿಸಲಾಗಿದ್ದರೂ ಕನ್ನಡ ನಾಟಕ ಕಂಪನಿಗಳು ಕನ್ನಡ ಸಂಸ್ಕೃತಿಗೆ ದುಡಿದವು. ನಾಟಕಾಭಿರುಚಿ ಹೆಚ್ಚಿದ್ದ ಈ ಭಾಗದಲ್ಲಿ ಶಿವಮೂರ್ತಿಸ್ವಾಮಿಗಳ ಕೊಣ್ಣೂರು ಕಂಪನಿ, ವೆಂಕೋಬರಾಯರ ಶಿರಹಟ್ಟಿ ಕಂಪನಿಗಳು ಹೆಸರು ಮಾಡಿದವು. ವಾಮನ್‌ರಾವ್ ಅವರ ವಿಶ್ವಗುಣಾದರ್ಶ ಕಂಪನಿ ಮರಾಠಿ ಮಾದರಿಯಲ್ಲಿ ರಚಿತವಾದ ಕನ್ನಡ ನಾಟಕಗಳನ್ನು ಪ್ರದರ್ಶಿಸಿ ಜನರನ್ನು ಸೆಳೆಯಿತು.

ಅದ್ದೂರಿ ಮರಾಠಿ ಕಂಪನಿಗಳಿಗೆ ಸೆಡ್ಡು ಹೊಡೆಯುಂತಹ ರಂಗ ಸಜ್ಜಿಕೆಯಿಂದ ಪೌರಾಣಿಕ, ಸಾಮಾಜಿಕ ನಾಟಕಗಳು ಜನಪ್ರಿಯವಾದವು. ಆರ್ಥಿಕವಾಗಿ ಚೈತನ್ಯವನ್ನು ಪಡೆದವು. ಹಲಗೇರಿ ಕಂಪನಿ, ಗರೂಡ ಸದಾಶಿವರಾಯರ ದತ್ತಾತ್ರೇಯ ಸಂಗೀತ ನಾಟಕ ಮಂಡಲಿ, ಹುಲಿಮನೆ ಸೀತಾರಾಮ ಶಾಸ್ತ್ರಿಗಳ ಜಯಕರ್ನಾಟಕ ನಾಟಕ ಮಂಡಲಿ ಹಂದಿಗನೂರು ಸಿದ್ಧರಾಮಪ್ಪನವರ ವಿಶ್ವರಂಜನ ನಾಟಕ ಮಂಡಲಿ, ಗಂಗೂಬಾಯಿ ಗುಳೇದಗುಡ್ಡ ಅವರ ಶ್ರೀಕೃಷ್ಣನಾಟಕ ಮಂಡಲಿ, ವೀರಾಚಾರ್ಯರ ಶ್ರೀರಾಮ ಸೇವಾ ನಾಟ್ಯ ಸಂಘ, ಬಸವರಾಜ ಮನ್ಸೂರ್ ಹಾಗೂ ಗೋಹರ್‌ಬಾಯಿ ಕರ್ನಾಟಕಿ ಅವರ ವಾಣಿ ವಿಲಾಸ ನಾಟಕ ಮಂಡಲಿ ಉತ್ತರ ಕರ್ನಾಟಕದಲ್ಲಿ ಹೆಸರಿಸಬಹುದಾದ ನಾಟಕ ಕಂಪನಿಗಳಲ್ಲಿ ಕೆಲವು.





20ನೇ ಶತಮಾನದ ಮೊದಲರ್ಧ ಉತ್ತರ ಕರ್ನಾಟಕದಲ್ಲಿ ಕಂಪನಿ ನಾಟಕಗಳ ಮಹಾಪೂರವೇ ಹರಿದಿತ್ತು. ಐವತ್ತಕ್ಕೂ ಹೆಚ್ಚು ನಾಟಕ ಮಂಡಲಿಗಳು ಈ ಭಾಗದಲ್ಲಿ ಮೊಕ್ಕಾಂ ಹೂಡುತ್ತಿದ್ದವು. ಕೆಲವು ಕಂಪನಿಗಳು ಮಹಾರಾಷ್ಟ್ರ, ಆಂಧ್ರಗಳಿಗೂ ಹೋಗಿ ನಾಟಕ ಆಡುತ್ತಿದ್ದವು.







ಗುಬ್ಬಿವೀರಣ್ಣ –ಬಿ. ಜಯಮ್ಮ



ಗುಬ್ಬಿವೀರಣ್ಣ





ರಾಜಾನಂದ್


ಗರೂಡ ಸದಾಶಿವರಾಯರು, ಏಣಗಿ ಬಾಳಪ್ಪ, ಚಿತ್ತರಗಿ ಗಂಗಾಧರ ಶಾಸ್ತ್ರೀ, ಜೋಳದ ರಾಶಿ ದೊಡ್ಡನಗೌಡ, ಚಿಂದೋಡಿ ವೀರಪ್ಪ, ಹುಲಿಮನೆ ಸೀತಾರಾಮ ಶಾಸ್ತ್ರೀ, ಹಂದಿಗನೂರು ಸಿದ್ಧರಾಮಪ್ಪ, ಬಸವರಾಜ ಮನ್ಸೂರ್, ಸಿದ್ಧಯ್ಯಸ್ವಾಮಿ, ಚಿಂದೋಡಿ ಲೀಲಾ ಮುಂತಾದ ಜನಪ್ರಿಯ ಕಲಾವಿದರು ಸತ್ವಯುತ ನಾಟಕಗಳನ್ನು ನೋಡುಗರಿಗೆ ಉಣಬಡಿಸಿದರು.

ಹೇಮರೆಡ್ಡಿಮಲ್ಲಮ್ಮ, ಎಚ್ಚಮನಾಯಕ, ಕಿತ್ತೂರು ಚೆನ್ನಮ್ಮ, ಟಿಪ್ಪುಸುಲ್ತಾನ್, ಕಬೀರ್‌ದಾಸ್, ಶರಣಬಸವ, ಕೃಷ್ಣಲೀಲೆ, ಕಂಸವಧೆ, ಶಕ್ತಿವಿಲಾಸ, ವಿಷಮ ವಿವಾಹ ಮುಂತಾದ ಮಹತ್ವದ ನಾಟಕಗಳು ಈ ಸಮಯದಲ್ಲಿ ಪ್ರಯೋಗಿಸಲ್ಪಟ್ಟ ನಾಟಕಗಳಲ್ಲಿ ಕೆಲವು.

ಅತ್ಯಾಧುನಿಕ ರಂಗ ಸಜ್ಜಿಕೆ, ವಿದ್ಯುತ್ ದೀಪಗಳ ಚಮತ್ಕಾರ, ಕ್ಷಣಾರ್ಧದಲ್ಲಿ ದೃಶ್ಯಗಳಲ್ಲಿ ಮಾರ್ಪಾಡು, ಇಂಪಾದ ಸಂಗೀತ ಮೇಳ, ಸುಶ್ರಾವ್ಯ ಹಾಡುಗಾರಿಕೆ, ಮೇರು ನಟರ ಅಭಿನಯ, ಆಸಕ್ತಿ ಕೆರಳಿಸುವ ಸನ್ನಿವೇಶಗಳು, – ಇವೆಲ್ಲವುಗಳ ಜೊತೆ ಸತ್ವಯುತ ಕಥಾ ಹಂದರ, ಹಾಸ್ಯ–ನೃತ್ಯವೈವಿಧ್ಯ–ಕಂಪನಿ ನಾಟಕಗಳ ಬೆಳವಣಿಗೆಗೆ ಕಾರಣವಾಯಿತು.

ಉತ್ತರ ಕರ್ನಾಟಕದಲ್ಲಿ ಏನಿಲ್ಲವೆಂದರೂ 50 ನಾಟಕ ಮಂಡಲಿಗಳಾದರೂ ಚಾಲ್ತಿಯಲ್ಲಿರುತ್ತಿದ್ದವು. ಜಾತ್ರೆಗಳ ಕಾಲದಲ್ಲಂತೂ ಕಂಪನಿ ನಾಟಕಗಳ ಭರಾಟೆ ಇನ್ನೂ ಜೋರಾಗಿರುತ್ತಿದ್ದವು.

ಕನ್ನಡ ನಾಡಿನ ಉತ್ತರ ಭಾಗದಲ್ಲಿ ವೃತ್ತಿರಂಗಭೂಮಿ ಹೀಗೆ ಬೆಳವಣಿಗೆ ಹೊಂದಿದ್ದರೆ ಮೈಸೂರು ಭಾಗದಲ್ಲಿ ಪರಿಸ್ಥಿತಿ ತುಸು ಭಿನ್ನವಾಗಿತ್ತು.







ಚಿತ್ತರಗಿ ಗಂಗಧರ ಶಾಸ್ತ್ರಿ



ಮೈಸೂರು ಅರಮನೆ ಆಶ್ರಯದಲ್ಲಿದ್ದ ನಾಟಕ ಮಂಡಲಿ ಪ್ರತ್ಯೇಕಗೊಂಡ ಮೇಲೆ ರಸಿಕ ಮನೋಲ್ಲಾಸಿನಿ ನಾಟಕ ಮಂಡಲಿ ಸ್ತ್ರೀಪಾತ್ರ ವಹಿಸುತ್ತಿದ್ದ ಗೌರೀನರಸಿಂಹಯ್ಯನವರು ಕಟ್ಟಿದ ಶ್ರೀ ಸರಸ್ವತಿ ವಿಲಾಸ ನಾಟಕಸಭೆ, ಬೆಂಗಳೂರಿನಲ್ಲಿ ನಾಟಕ ಸಂಘ. ಶ್ರೀಕಂಠೇಶ್ವರ ಕರ್ಣಾಟಕ ಸಭೆ, ಗೊಲ್ಲರಪೇಟೆ ನಾಟಕಸಭೆ. ಬುಳ್ಳಪ್ಪನವರ ಕಂಪನಿ. ಮೈಸೂರು ಪ್ರಾಂತ್ಯದಲ್ಲಿ ಸ್ಥಾಪನೆಗೊಂಡ ಕೆಲವು ಮುಖ್ಯ ನಾಟಕ ಮಂಡಲಿಗಳು.

ಕನ್ನಡಿಗರ ಮನಸ್ಸಿನಲ್ಲಿ ಬಹುಕಾಲ ಉಳಿಯುವಂತಹ ಇನ್ನೆರಡು ಕಂಪನಿಗಳೆಂದರೆ ಗುಬ್ಬಿ ಶ್ರೀ ಚೆನ್ನಬಸವೇಶ್ವರ ಕೃಪಾಪೋಷಿತ ನಾಟಕ ಸಂಘ ಹಾಗೂ ಎ.ವಿ. ವರದಾಚಾರ್ ಅವರ ರತ್ನಾವಳಿ ಥಿಯೇಟ್ರಿಕಲ್ ಕಂಪನಿ.

ಕನ್ನಡ ರಂಗಭೂಮಿ ಚರಿತ್ರೆಯಲ್ಲಿ ಈ ಎರಡೂ ಕಂಪನಿಗಳ ಕೊಡುಗೆ ಅತ್ಯಂತ ಮಹತ್ವದ್ದು. ವರದಾಚಾರ್ ಅವರು ಕಾಲು ಶತಮಾನ ಕನ್ನಡ ವೃತ್ತಿರಂಗಭೂಮಿಯ ಚಾಲನಾಶಕ್ತಿ, ಹೊಸಪ್ರಯೋಗಗಳು, ನವನವೀನ ರಂಗ ಸಜ್ಜಿಕೆ, ಕಲಾವಿದರಲ್ಲಿ ಶಿಸ್ತು, ಪ್ರೇಕ್ಷಕ ಪ್ರಭುವಿಗೆ ಗೌರವ ಎಲ್ಲದರಲ್ಲೂ ಯಶಕಂಡರು. ಕನ್ನಡನಾಡು ಮಾತ್ರವಲ್ಲದೆ ಆಂಧ್ರ, ತಮಿಳುಪ್ರದೇಶಗಳಲ್ಲೂ ಕನ್ನಡ ಕಂಪು ಹರಿಸಿದ ಶ್ರೇಯಸ್ಸು ವರದಾಚಾರ್ ಅವರಿಗೆ ಸೇರುತ್ತದೆ.

ವಿಶ್ವಕವಿ ರವೀಂದ್ರನಾಥ ಟ್ಯಾಗೋರ್, ಸಮಾಜಸೇವಕಿ ಡಾ॥ ಅನಿಬೆಸೆಂಟ್ ಮೊದಲಾದ ಗಣ್ಯರಿಗೆ ಕನ್ನಡದ ಸೊಗಡು ಪರಿಚಯಿಸಿದ ಗೌರವವೂ ವರದಾಚಾರ್ ಅವರದು.

ಜಿ. ಎಚ್. ವೀರಣ್ಣನವರು ಗುಬ್ಬಿಕಂಪನಿ ನೇತೃತ್ವವಹಿಸಿಕೊಂಡ ಮೇಲೆ ಕನ್ನಡ ವೃತ್ತಿರಂಗಭೂಮಿಗೆ ಆ ಸಂಸ್ಥೆ ಕೊಟ್ಟಿರುವ ಕೊಡುಗೆಗಳು ಒಂದೆರಡಲ್ಲ.


ಇಡೀ ದಕ್ಷಿಣ ಭಾರತವೇ ಕನ್ನಡ ನಾಟಕ ವಲಯದತ್ತ ನೋಡುವಂತೆ ಮಾಡಿದ ಸಾಧನೆ ಗುಬ್ಬಿ ಕಂಪನಿಯದು. ಹೆಚ್ಚು ಪ್ರದರ್ಶನಗಳ ನಾಟಕಗಳನ್ನು ಆಡುವುದರಿಂದ ಮೊದಲ್ಗೊಂಡು ರಂಗಸ್ಥಳದಲ್ಲಿ ಅನೇಕ ಸಾಹಸಮಯ ಸನ್ನಿವೇಶಗಳನ್ನು ಸೃಷ್ಟಿಸುವವರಗೆ ಹಲವು ದಾಖಲೆಗಳನ್ನು ಮಾಡಿದ್ದು ಗುಬ್ಬಿ ಕಂಪನಿ.



ಡಾ॥ ರಾಜ್‌ಕುಮಾರ್








ಲೇಕೇಶ್



ಬೆಳಕಿನ ವೈಭವ, ಯಂತ್ರೋಪಕರಣಗಳ ಉಪಯೋಗ ಸಂಗೀತ, ಗಾಯನ ವಿಶಿಷ್ಟ ಪ್ರಯೋಗ ಪ್ರತಿಭಾವಂತ ಕಲಾವಿದ–ತಂತ್ರಜ್ಞರನ್ನು ಬೆಳಕಿಗೆ ತಂದಿದ್ದು ಆಂಧ್ರ–ತಮಿಳುನಾಡುಗಳಲ್ಲಿ ಕನ್ನಡ ಕೀರ್ತಿ ಫತಾಕೆ ಹಾರಿಸಿದ್ದು ಕುರುಕ್ಷೇತ್ರದಂತಹ ಅದ್ದೂರಿ ನಾಟಕವನ್ನು ರಂಗದ ಮೇಲೆ ತಂದಿದ್ದು, ಟ್ರಿಕ್‌ಗಳ ಮೂಲಕ ನಾಟಕ ಪ್ರೇಕ್ಷರಿಗೆ ಅಚ್ಚರಿ ಮೂಡಿಸಿದ್ದು ಹೀಗೆ ಗುಬ್ಬಿ ನಾಟಕ ಕಂಪನಿ ಮೊದಲುಗಳು ಒಂದೆರಡಲ್ಲ.

ಬಳ್ಳಾರಿ ರಾಘವ, ಮಹಮದ್‌ಪೀರ್, ಎಚ್.ಎಲ್.ಎನ್. ಸಿಂಹ, ಎಂ.ವಿ. ಸುಬ್ಬಯ್ಯನಾಯ್ಡು, ಆರ್. ನಾಗೇಂದ್ರರಾವ್, ಕೆ. ಹಿರಣ್ಣಯ್ಯ, ರಾಮಯ್ಯ ಅಡಪ, ಬೆಳ್ಳಾವೆ ನರಹರಿ ಶಾಸ್ತ್ರಿ  ಮುಂಡಾಜೆ ರಂಗನಾಥಭಟ್ಟ, ಜೋಳದ ರಾಶಿದೊಡ್ಡನಗೌಡ, ಅ ನ ಕೃಷ್ಣರಾವ್, ಜಿ. ನಾಗೇಶರಾವ್, ಎಂ. ಎನ್. ಗಂಗಾಧರರಾವ್, ಮಳವಳ್ಳಿ ಸುಂದರಮ್ಮ, ಕೆ. ಅಶ್ವಥಮ್ಮ, ಲಕ್ಷ್ಮೀಬಾಯಿ, ಕಮಲಾಬಾಯಿ, ಬಿ. ಜಯಮ್ಮ, ಬಿ. ಪುಟ್ಟಸ್ವಾಮಯ್ಯ, ಎಂ.ವಿ. ರಾಜಮ್ಮ, ರಾಜ್‌ಕುಮಾರ್, ಜಿ.ವಿ. ಅಯ್ಯರ್, ಬಾಲಕೃಷ್ಣ, ನರಸಿಂಹರಾಜು, ಸಿ.ಬಿ. ಮಲ್ಲಪ್ಪ, ಎಂ.ಜಿ. ಮರಿರಾವ್, ಇವರೆಲ್ಲ ಕನ್ನಡ ರಂಗಭೂಮಿ ಬೆಳಗಲು ಕಾರಣರಲ್ಲಿ ಕೆಲವರು.




ಆರ್. ಡಿ. ಕಾಮತ್



ಎಂ.ವಿ. ಸುಬ್ಬಯ್ಯನಾಯ್ಡು

ಮಾಸ್ಟರ್ ಹಿರಣ್ಣಯ್ಯ






ಟಿ.ಆರ್. ನರಸಿಂಹರಾಜು



ಯೋಗಾ ನರಸಿಂಹ



ವಾಸುದೇವರಾವ್



ಎ.ಜಿ. ಮರಿರಾವ್



ಮಾ॥ ಹಿರಣ್ಣಯ್ಯ

ವೃತ್ತಿರಂಗಭೂಮಿ ಕನ್ನಡ ನಾಡಿನ ತುಂಬಾ ಹರಡಿ ನೆರೆ ರಾಜ್ಯಗಳಲ್ಲೂ ಪ್ರತಿಭಾ ಪ್ರದರ್ಶನ ನಡೆಸುತ್ತಿದ್ದ ಸಂದರ್ಭದಲ್ಲಿ ಅಲ್ಲಲ್ಲಿ ಹವ್ಯಾಸಿ (ಕಲಾವಿಲಾಸಿ) ನಾಟಕ ತಂಡಗಳು ಅಸ್ತಿತ್ವಕ್ಕೆ ಬಂದವು. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಕಥಾವಸ್ತುಗಳಿಗಿಂತ ಭಿನ್ನವಾಗಿ ಹೊಸ ಬಗೆಯ ಹಾಗೂ ಸಮಕಾಲೀನ ಸಮಾಜದ ಸ್ಥಿತಿಗತಿಗಳ ಮೇಲೆ ಕ್ಷಕಿರಣ ಬೀರುವಂತಹ ವಸ್ತು ಆಧರಿಸಿ ನಾಟಕಗಳನ್ನು ಪ್ರದರ್ಶನ ಮಾಡಿದವರಲ್ಲಿ ಪ್ರಹಸನ ಪಿತಾಮಹ ಟಿ.ಪಿ. ಕೈಲಾಸಂ ಅವರದು.



ಲಂಡನ್ ಅಭಿನಯ ಶಾಲೆಯಲ್ಲಿ ಕಲಿತ ವಿಷಯಗಳನ್ನು ಇಲ್ಲಿ ಅನುಷ್ಠಾನಗೊಳಿಸುತ್ತಿದ್ದ ಟಿ.ಪಿ. ಕೈಲಾಸಂ ಅವರೊಂದಿಗೆ ಉತ್ತರ ಕರ್ನಾಟಕದಲ್ಲಿ ಇದೇ ಮಾದರಿಯನ್ನು ಅನುಸರಿಸಿದರೂ ಕೊಂಚ ಭಿನ್ನಬಗೆಯಲ್ಲಿ ನಡೆದವರು ಶ್ರೀರಂಗರು.



ಕೈಲಾಸಂ, ಶ್ರೀರಂಗ ಇಬ್ಬರು ರಂಗಸ್ಥಳಕ್ಕೆ ತಂದ ಬಹುತೇಕ ನಾಟಕಗಳು ಆ ಕಾಲಕ್ಕೆ, ಕ್ರಾಂತಿ ಕಾರಕವಾಗಿದ್ದವು. ಕೆಲವಂತೂ ವಾಗ್ವಾದಗಳನ್ನು ಹುಟ್ಟುಹಾಕಿದವು. ಶ್ರೀರಂಗರ ಶಕ್ತಿಯುತ ಹಾಗೂ ಸತ್ವಯುತ ನಾಟಕಗಳು ಬೇರೆ ಭಾಷೆಗಳಿಗೂ ಅನುವಾದಗೊಂಡವು. ಸ್ವತಹ ಅತ್ಯುತ್ತಮ ನಟರಾಗಿದ್ದ ಕೈಲಾಸಂ ತಮ್ಮ ಆಲೋಚನೆಗಳನ್ನು ರಂಗದ ಮೇಲೆ ಸಮರ್ಥವಾಗಿ ಮಂಡಿಸುತ್ತಿದ್ದರು.



ಕನ್ನಡ ರಂಗ ಪರಂಪರೆ ವಿನೂತನತೆಯ ಅಳವಡಿಸಿಕೊಂಡು ನಡೆಯುತ್ತಿರುವಾಗಲೇ ಒಂದು ಹೊಸ ಮನರಂಜನಾ ಮಾಧ್ಯಮ ಚಲನಚಿತ್ರ, ಮೂಕಿ–ಟಾಕಿ ಕಾಲದಿಂದಲೇ ಜನರನ್ನು ರಂಜಿಸಲು ಶುರುವಿಟ್ಟು ಚಲನಚಿತ್ರದ ಮುಂದೆ ವೃತ್ತಿ ರಂಗಭೂಮಿ ಅನೇಕ ವೈವಿಧ್ಯತೆಗಳನ್ನು ಅಳವಡಿಸಿಕೊಂಡರೂ ಮಂಕಾಯಿತು.


PWD No.3.



ಬೆರಳೆಣಿಕೆಯಷ್ಟು ನಾಟಕ ಸಂಸ್ಥೆಗಳನ್ನು ಹೊರತುಪಡಿಸಿದರೆ ಬಹುತೇಕ ಎಲ್ಲಾ ಪ್ರಮುಖ ಕಂಪನಿಗಳೂ ಕಣ್ಮುಚ್ಚಿದವು. ಕರ್ನಾಟಕ ನೀಡುತ್ತಿರುವ ಆರ್ಥಿಕ ನೆರವಿನ ಪರಿಣಾಮವಾಗಿ ಈಗಲೂ 20ಕ್ಕೂ ಹೆಚ್ಚು ವೃತ್ತಿರಂಗ ನಾಟಕ ಕಂಪನಿಗಳು ಅಸ್ತಿತ್ವದಲ್ಲಿವೆ ಎನ್ನುವುದು ಸಮಾಧಾನದ ಸಂಗತಿ.

ಕನ್ನಡ ರಂಗಭೂಮಿ ಏಳುಬೀಳುಗಳ ನಡುವೆ ಸಾಗುತ್ತಿದ್ದು ಸ್ವಾತಂತ್ರ್ಯಾನಂತರ ಇನ್ನೊಂದು ತಿರುವು ಪಡೆದುಕೊಂಡಿತು. ಅದು ಪ್ರೇಕ್ಷಕರ ಅಭಿರುಚಿ. ರಂಗಮಂದಿರಕ್ಕೆ ಹೋಗಿ ಜೀವಂತವಾದ ವ್ಯಕ್ತಿಗಳು ಅಭಿನಯಿಸುತ್ತಿದ್ದ ಪ್ರದರ್ಶನಗಳತ್ತ ಜನ ಆಸಕ್ತಿ ಕಳೆದುಕೊಂಡರು. ಪರದೆ ಏರಿ ಪ್ರಕಟವಾಗುತ್ತಿದ್ದ ದೃಶ್ಯಗಳಿಗಿಂತ ಪರದೆ ಮೇಲೆ ಕಾಣುವ ಸನ್ನಿವೇಶಗಳು ಮೇಲುಗೈ ಸಾಧಿಸಿದವು. ರಂಗಮಂದಿರಗಳ ಜಾಗಗಳಲ್ಲಿ ಚಿತ್ರಮಂದಿರಗಳು ಎದ್ದವು. ಪ್ರೇಕ್ಷಕರು ರಜತ ಪರದೆಯಲ್ಲಿ ಚಿತ್ರ ವೀಕ್ಷಿಸಲು ಇಷ್ಟಪಟ್ಟರು.

ವೃತ್ತಿ ರಂಗಭೂಮಿ ಹಾಗೂ ಚಲನಚಿತ್ರಗಳ ನಡುವೆ ಗೌಣವಾಗಿದ್ದ ಹವ್ಯಾಸಿ ರಂಗಭೂಮಿ ಸ್ವಾತಂತ್ರ್ಯಾನಂತರ ಒಂದಷ್ಟು ದಷ್ಟಪುಷ್ಟವಾಯಿತು. ಆವರೆಗೂ ಇದ್ದ ಪುರಾಣ-ಇತಿಹಾಸಗಳ ಕಥಾಹಂದರದ ಅವಲಂಬನೆ ಕೊಂಚ ಕಡಿಮೆಯಾಗಿ ಪ್ರಸ್ತುತ ಪರಿಸ್ಥಿತಿಯನ್ನು ಅನಾವರಣಗೊಳಿಸುವ ಪ್ರಯತ್ನವನ್ನು ಹವ್ಯಾಸಿ ರಂಗ ಆರಂಭಿಸಿದ್ದು ಅದರತ್ತ ಒಂದು ವರ್ಗದ ಜನ ಬರಲಾರಂಭಿಸಿದರು.

ಇದಕ್ಕೆ ಪೂರಕವಾಗಿ ಸಾಹಿತ್ಯ ಕ್ಷೇತ್ರದಲ್ಲೂ ಇದೇ ಬಗೆಯ ಬದಲಾವಣೆ ಕಂಡು ಬಂದಿತ್ತು. ಬೆಂಗಳೂರಿಗೆ ಬಂದಿಳಿದ ಶ್ರೀರಂಗರು ಇದನ್ನು ಒಳಗೊಂಡ ನಾಟಕಗಳ ರಚನೆ, ಕಲಾವಿದರ ತರಬೇತಿ, ನಾಟಕ ಪ್ರದರ್ಶನಗಳಿಗೆ ಒತ್ತು ಕೊಟ್ಟರು.

ಆಗ ಭಾರತದಲ್ಲಿ ಕಂಡುಬಂದ ಪಂಚವಾರ್ಷಿಕ ಯೋಜನಾ ಯುಗ, ಕೈಗಾರಿಕೀಕರಣ, ಚಳವಳಿ, ಸಮಾಜದಲ್ಲಿನ ತಾರತಮ್ಯ ವಾತಾವರಣ, ರಾಜಕಾರಣದ ಏಳುಬೀಳುಗಳು ಜಾಗತಿಕವಾದ ವಿದ್ಯಮಾನ – ಇವೆಲ್ಲ ನಾಟಕ ಕ್ಷೇತ್ರದ ಮೇಲೆ ಪರಿಣಾಮ ಬೀರಲು ತಡಮಾಡಲಿಲ್ಲ.

ವಾಕ್ಚಿತ್ರಗಳು ವೃತ್ತಿ ರಂಗಭೂಮಿ ಮೇಲೆ ಪ್ರಭಾವ ಮಾಡಿದಂತೆ ಹವ್ಯಾಸಿ ರಂಗದ ಮೇಲೆ ಮಾಡಲು ಸಾಧ್ಯವಾಗಲಿಲ್ಲ. ಇದರ ಬೆನ್ನಿಗೆ ಬಿದ್ದಿದ್ದು ಯುವ ಸಮೂಹ ಹಾಗೂ ಕಾಲೇಜು ವಿದ್ಯಾರ್ಥಿಗಳಾಗಿದ್ದು ಮತ್ತು ಈ ವರ್ಗದ ಕಾರ್ಯಕರ್ತರು ಪೂರ್ಣವಾಗಿ ರಂಗಭೂಮಿಯನ್ನು ಅವಲಂಬಿಸಿರಲಿಲ್ಲ. ಹೀಗಾಗಿ ಹವ್ಯಾಸಿ ರಂಗಭೂಮಿ ಭಿನ್ನ ರೀತಿಯಲ್ಲಿ ಸಾಗಿತು.



ಸಂವಾದಗಳ ವಾಗ್ವಾದ, ಪುರಾಣ ಕಥೆಗಳ ವಿಶ್ಲೇಷಣೆ, ವಿಭಿನ್ನ ಪಾತ್ರ ಸೃಷ್ಟಿ, ಪಾರದರ್ಶಕ ವಿಚಾರ ವಿನಿಮಯ, ಭಾಷೆಯ ಪ್ರಭಾವಶಾಲಿ ಪ್ರಯೋಗ, ಸಾಮಾಜಿಕ ಸಮಸ್ಯೆಗಳ ಪರಿಹಾರದ ವಿಚಾರ – ಇವೆಲ್ಲವೂ ಇದ್ದ ಹವ್ಯಾಸಿರಂಗ ಜನ ಸಮುದಾಯವನ್ನು ಎಚ್ಚರಗೊಳಿಸುವ, ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿತು.

ಗಿರೀಶ್ ಕಾರ್ನಾಡ್, ಪಿ. ಲಂಕೇಶ್, ಚಂದ್ರಶೇಖರ ಕಂಬಾರ್, ಚಂದ್ರಶೇಖರ ಪಾಟೀಲ್, ಕ.ವೆಂ. ರಾಜಗೋಪಾಲ, ಕೆ.ವಿ. ಸುಬ್ಬಣ್ಣ, ಬಿ.ವಿ. ಕಾರಂತ, ಸಿಂಹ, ಲೋಕೇಶ್, ಹೀಗೆ ಹಲವು ಪ್ರತಿಭಾವಂತರ ಗುಂಪು ಹವ್ಯಾಸಿ ರಂಗಕ್ಕೆ ಸಿಕ್ಕಿದ್ದರಿಂದ ಜನಾಕರ್ಷಣೆ ಹೆಚ್ಚಲು ಸಾಧ್ಯವಾಯಿತು.


ಆಂಗ್ಲ ನಾಟಕಗಳ ಅನುವಾದ, ಪರಂಪರೆ ವಿರುದ್ಧ ಸಿಡಿದೇಳುವಂತಹ ಅಂಶಗಳಿರುವ ನವ್ಯನಾಟಕ, ಭಾರತೀಯ ಪರಂಪರೆಯಲ್ಲಿನ ಕಥೆ-ಪಾತ್ರಗಳನ್ನು ಪ್ರಚಲಿತಗೊಳಿಸುವ ನಾಟಕಗಳು ರಂಗದ ಮೇಲೆ ಬರತೊಡಗಿದವು.


ಕಾರ್ನಾಡರ ಯಯಾತಿ, ತುಘಲಕ್, ಹಯವದನ, ಪಿ. ಲಂಕೇಶ್‌ರ 'ಟಿ ಪ್ರಸನ್ನನ ಗೃಹಸ್ಥಾಶ್ರಮ' ಕಂಬಾರರ 'ಜೋಕುಮಾರಸ್ವಾಮಿ' ಭಿನ್ನವಾದ ರಂಗಮಾರ್ಗಗಳನ್ನು ಅನುಸರಿಸಿ ಹೊಸ ಸಾಧ್ಯತೆಗಳತ್ತ ಮುನ್ನೋಟ ತೋರಿದವು. ಇಂತಹ ನಾಟಕಗಳಿಂದ ಪ್ರೇಕ್ಷಕರಿಗೆ ಹೊಸ ಅನುಭವ ದಕ್ಕಿತು. ಇವೆಲ್ಲ ಜರುಗಿದ ಅರವತ್ತರ ದಶಕದಲ್ಲಿ ಹವ್ಯಾಸಿ ರಂಗಭೂಮಿ ನವೀನ ಬಗೆಯ ಚಳವಳಿಗೆ ನಾಂದಿ ಹಾಡಿ 70ರ ದಶಕಕ್ಕೆ ನಾವೀನ್ಯತೆಯ ಮುನ್ನುಡಿ ಬರೆಯಿತು.

ಇದಾದ ನಂತರ ರಾಷ್ಟ್ರೀಯ ನಾಟಕ ಶಾಲೆಯ ಪದವೀಧರರು ಹವ್ಯಾಸಿ ರಂಗಕ್ಕೆ ಪ್ರವೇಶ ಮಾಡಿದರು. ಬೀದಿ ನಾಟಕ ಪ್ರಯೋಗಗಳೂ ಹೆಚ್ಚಿದವು. ಜನಪದ, ವೃತ್ತಿ, ಹವ್ಯಾಸಿ ಎಲ್ಲವೂ ರಂಗದ ಮೇಲೆ ಹೊಚ್ಚ ಹೊಸ ಪ್ರಯೋಗಗಳಾಗಿ ಅನಾವರಣಗೊಂಡವು.









ದೇವನೂರ ಮಹಾದೇವರ
ಕುಸುಮಬಾಲೆ
ನಿರ್ದೇಶನ: ಬಸವಲಿಂಗಯ್ಯ
ಸಂಗೀತ : ಬಿ.ವಿ. ಕಾರಂತ




ಪ್ರಸಂಗ


ಶಾಂತಮುದ್ರೆ
ವೀರವರಸೆ


27-8-90 ರಿಂದ 1-9-90ರವರೆಗೆ
NATAKA KARNATAKA
RANGAYANA PRESENTS
'EURIPIDES'
"HIPPOLYTOS"
DESIGNED & DIRECTED BY
CALITSIS VASILIOS
27-8-90 TO 1-9-90




ತಲೆದಂಡ
ತಲೆದಂಡ


ಶ್ರೀಕೃಷ್ಣಸಂಧಾನ





ಕಿಂದರಿ ಜೋಗಿ

ಸುಸಜ್ಜಿತ ರವೀಂದ್ರ ಕಲಾಕ್ಷೇತ್ರವನ್ನು ಸಮರ್ಥವಾಗಿ ಬಳಸಿಕೊಂಡು ಅನೇಕ ಪ್ರಯೋಗಗಳನ್ನು ಕಂಡುಕೊಂಡ ಹವ್ಯಾಸಿ ರಂಗ ಅನೇಕ ಅನುವಾದಗಳ ಜೊತೆಗೆ (ಘಾಸೀರಾಂ ಕೊತ್ವಾಲ್– ನವೀನ ಸದಾರಮೆ) ಸಮುದಾಯ ಈ ನೆಲದ ಚಾರಿತ್ರಿಕ ನಾಟಕಗಳನ್ನು (ಹುತ್ತವ ಬಡಿದರೆ, ಕದಡಿದ ನೀರು), ವಿದೇಶಿ ನಾಟಕಗಳ ಅನುವಾದಗಳನ್ನು (ತಾಯಿ) ರಂಗದ ಮೇಲೆ ತಂದಿತು.

ಇದೇ ಕಾಲಘಟ್ಟ ರಾಜಕೀಯ ನಾಟಕಗಳಿಗೂ (ಬೆಲ್ಚಿ–ಗೆಲಿಲಿಯೋ) ವೇದಿಕೆ ಒದಗಿತು. ಕೆ.ವಿ. ನಾರಾಯಣ, ಪ್ರಸನ್ನ, ಕಿ.ರಂ. ನಾಗರಾಜು, ಟಿ. ಎಸ್. ರಂಗಾ, ಟಿ.ಎಸ್. ನಾಗಾಭರಣ, ಸಿ.ಆರ್. ಸಿಂಹ ಮೊದಲಾದ ರಂಗಕರ್ಮಿಗಳು ರಂಗಭೂಮಿಗೆ ಜೀವ ತುಂಬಿದರೆ ಬಿ.ವಿ. ಕಾರಂತರು ದೊಡ್ಡ ಪಡೆಯನ್ನೇ ತಯಾರು ಮಾಡಿ ಹವ್ಯಾಸಿ ಚಳವಳಿಗೆ ಜೀವ ತುಂಬಿದರು.

ಒಂದೆರಡು ಸಂಘಟನೆಗಳೇ ಚಾಲನೆಯಲ್ಲಿದ್ದ ಹವ್ಯಾಸಿ ರಂಗದಲ್ಲಿ ಅನೇಕ ತಂಡಗಳು ರೂಪುಗೊಂಡವು. ಇವುಗಳಲ್ಲಿ ಕೆಲವು ಗುಂಪುಗಳಲ್ಲಿ ಸೇರಿದರೆ ಇನ್ನೂ ಹಲವು ವ್ಯಕ್ತಿ ಪ್ರಧಾನವಾಗಿ ಹೊರಹೊಮ್ಮಿದವು. ಇದರೊಟ್ಟಿಗೆ ಬೆಂಗಳೂರಿನಲ್ಲೇ ಇದ್ದ ಹವ್ಯಾಸಿ ಚಳವಳಿ ನಾಡಿನುದ್ದಕ್ಕೂ ಹರಡಿತು. ತರಬೇತಿ, ಕಾರ್ಯಾಗಾರ, ರಂಗಶಿಕ್ಷಣ, ರಸಗ್ರಹಣ, ರಂಗಪ್ರಯೋಗ, ರಂಗ ಉತ್ಸವ, ಇತ್ಯಾದಿ ಚಟುವಟಿಕೆಗಳು ನಡೆದವು. ಕೆಲವೆಡೆ ರಂಗಶಾಲೆಗಳು ಆರಂಭವಾದವು. ಹೊಸ ಪ್ರಯೋಗಗಳಿಗೆ ಇವು ಹಾದಿ ಮಾಡಿಕೊಟ್ಟವು.

ಬೆನಕದಿಂದ ಬಿ.ವಿ. ಕಾರಂತರು, ನಟರಂಗದಿಂದ ಸಿಂಹ, ಕಪ್ಪಣ್ಣ, ಆರ್. ನಾಗೇಶ್, ರಂಗ ನಿರಂತರದಿಂದ ಸಿ.ಜಿ.ಕೆ., ಟಿ.ಎನ್. ನರಸಿಂಹನ್, ಟಿ.ಎಸ್. ರಂಗ, ಬಿ. ಬಸವಲಿಂಗಯ್ಯ, ಬಿ. ಸುರೇಶ್, ಅಶೋಕ ಬಾದರದಿನ್ನಿ, ಸೂತ್ರದಾರದ ಲೋಕೇಶ್, ಎಲ್. ಕೃಷ್ಣಪ್ಪ ಹವ್ಯಾಸಿ ರಂಗಭೂಮಿಗೆ ಬುನಾದಿ ಹಾಕಿ ಮುನ್ನಡೆಯಲು ಕಾರಣರಾದರು. ಇದಕ್ಕೆ ಕಲಾಗಂಗೋತ್ರಿಯ ಡಾ॥ ಬಿ.ವಿ. ರಾಜಾರಾಂ, ಮುಖ್ಯಮಂತ್ರಿ ಚಂದ್ರು, ಬಿ. ಜಯಶ್ರೀ, ಎಸ್. ಮಾಲತಿ, ಶ್ರೀನಿವಾಸ ಪ್ರಭು, ಬಿ.ವಿ. ವೈಕುಂಠರಾಜು, ಗೋಪಾಲಕೃಷ್ಣ ನಾಯರಿ ಮೊದಲಾದವರ ಕೊಡುಗೆ ಇತ್ತು.




























ಹವ್ಯಾಸಿಗಳು ಮುಂಚೂಣಿಗೆ ಬಂದಿರುವಾಗಲೇ ವೃತ್ತಿರಂಗ ಭೂಮಿಯಲ್ಲಿ ಪಳಗಿದ ವಜ್ರಪ್ಪ ಅವರು ಪೌರಾಣಿಕ ನಾಟಕಗಳು ಹೆಚ್ಚಾಗಲು ಕಾರಣರು. ಇಂದು ಅತಿಹೆಚ್ಚು ಪೌರಾಣಿಕ ನಾಟಕಗಳು ಬೆಂಗಳೂರಿನಲ್ಲಿಯೇ ವರ್ಷದುದ್ದಕ್ಕೂ ಪ್ರದರ್ಶನಗೊಳ್ಳುತ್ತಿರುವುದಕ್ಕೂ ಇದೇ ಕಾರಣ.

ಕೈಲಾಸಂ, ಕೆ.ವಿ. ಅಯ್ಯರ್, ಪರ್ವತವಾಣಿ, ದಾಶರಥಿ ದೀಕ್ಷಿತ್, ಇದ್ದ ಬೆಂಗಳೂರು ಹವ್ಯಾಸಿ ರಂಗಭೂಮಿಯಲ್ಲಿ ಭಿನ್ನಮಾರ್ಗಹಾಕಿದ್ದು ಶ್ರೀರಂಗರು, ಬಳಿಕ ಪ್ರೊ॥ ಬಿ. ಚಂದ್ರಶೇಖರ್ ಕಾರ್ನಾಡರ 'ತುಘಲಕ್' ನಿರ್ದೇಶಿಸಿ ಇನ್ನೊಂದು ಮಹತ್ವದ ಗುರುತು ಹಾಕಿದರು. ಬಿ.ವಿ. ಕಾರಂತರು ನವನವೀನ ನಾಟಕಗಳನ್ನು (ಸತ್ತವರ ನೆರಳು ಮುಂತಾದವು) ನಿರ್ದೇಶಿಸಿದ್ದೇ ಅಲ್ಲದೆ ಹವ್ಯಾಸಿ ಚಕ್ರ ಸಾಗಲು ಸಮರ್ಥರನ್ನು ಸಿದ್ಧಗೊಳಿಸುವಲ್ಲಿ ಯಶಕಂಡರು.

ಸಿ.ಆರ್. ಸಿಂಹ ಏಕಾಭಿನಯದ ಟಿ.ಪಿ. ಟಿಪಿಕಲ್ ಕೈಲಾಸಂ, ರಸಋಷಿ ಕುವೆಂಪು, ಸಿ.ಜಿ.ಕೆ ಅವರ ಒಡಲಾಳ, ಟಿ.ಎನ್. ಸೀತಾರಾಂ ಅವರ ನಮ್ಮೊಳಗೊಬ್ಬ ನಾಜೂಕಯ್ಯ, ಶಂಕರನಾಗ್ ಅವರ ಸಂಕೇತ್ ನಾಟಕಗಳು (ನಾಗಮಂಡಲ, ನೋಡಿಸ್ವಾಮಿ ನಾವಿರೇದೇ ಹೀಗೆ)



ಟಿಪಿಕಲ್ ಟಿ.ಪಿ. ಕೈಲಾಸಂ, ಸಿ.ಆರ್. ಸಿಂಹ























ಎಚ್.ಎಸ್. ಶಿವಪ್ರಕಾಶ್‌ರ ಟಿಪ್ಪುಸುಲ್ತಾನ್ (ನಿ: ಸಿ.ಜಿ.ಕೆ.) ಬಿ. ಸುರೇಶರ 'ಅಹಲ್ಯೆ ನನ್ನ ತಾಯಿ', ಬಿ. ಜಯಶ್ರೀ ಅವರ ಜಾನಪದ ನಾಟಕಗಳು, ಪ್ರೇಮಾಕಾರಂತರ ಮಕ್ಕಳ ನಾಟಕಗಳು, ಎಸ್. ಮಾಲತಿ ಅವರ ಆಧುನಿಕ ನಾಟಕಗಳು, ಸುರೇಶ್ ಅನಗಳ್ಳಿ ಅವರ ಮಂಟೇಸ್ವಾಮಿ ಕಥಾ ಪ್ರಸಂಗ, ಆರ್. ನಾಗೇಶರ ಕೃಷ್ಣೇಗೌಡರ ಆನೆ (ಕಥೆ: ಪೂರ್ಣಚಂದ್ರತೇಜಸ್ವಿ) ಇವೆಲ್ಲ ಸಂಗತಿಗಳು ಉಲ್ಲೇಖಾರ್ಹ.

ರಂಗ ಶಿಕ್ಷಣ ಹಾಗೂ ರಂಗಪ್ರಯೋಗಗಳಿಂದ ಗಮನ ಸೆಳೆದ 'ನೀನಾಸಂ'ನಿಂದ ವಿನೂತನ 'ತಿರುಗಾಟ'ವನ್ನು ಕೆ.ವಿ. ಸುಬ್ಬಣ್ಣ ಆರಂಭಿಸಿದರೆ, ಕೆ.ವಿ. ಅಕ್ಷರ ಅದನ್ನು ಮುಂದುವರಿಸಿದ್ದಾರೆ. ಇದೇ ರೀತಿ ಸಂಚಾರ ಮಾಡಿ ನಾಟಕಗಳನ್ನು ಪ್ರದರ್ಶಿಸುವ 'ಶಿವ ಸಂಚಾರ' ಸಾಣೆಹಳ್ಳಿ ತರಳಬಾಳು ಮಠದ ವಿಭಿನ್ನ ಚಟುವಟಿಕೆ.

ಇದಾದ ಬಳಿಕ ಬಿ.ವಿ. ಕಾರಂತರು ಕರ್ನಾಟಕ ಸರ್ಕಾರಕ್ಕಾಗಿ ಆರಂಭಿಸಿದ ರೆಪರ್ಟರಿ 'ರಂಗಾಯಣ' ಮೈಸೂರಿನಲ್ಲಿ ಆರಂಭವಾಗಿ ಕುಲ್ಬರ್ಗ, ಧಾರವಾಡ, ಶಿವಮೊಗ್ಗಗಳಲ್ಲಿ ಶಾಖೆ ಹೊಂದಿ ರಾಷ್ಟ್ರೀಯ–ಅಂತರ ರಾಷ್ಟ್ರೀಯ ಗಮನ ಸೆಳೆದಿರುವ 'ರಂಗಾಯಣ' ಬಹುಬಗೆಯ ರಂಗ ಚಟುವಟಿಕೆಗಳಿಂದ ಹೆಸರುವಾಸಿ.








ಬಿಜಾಪುರದಲ್ಲಿ ಶ್ರೀನಿವಾಸ ತಾವರಗೇರಿ, ಪ್ರಮೋದ್‌ಶಿಗ್ಗಾಂವ್, ಧ್ರುವರಾಜ ದೇಶಪಾಂಡೆ, ಸಾಗರದ ಚಿದಂಬರರಾವ್ ಜಂಬೆ, ಧಾರವಾಡದ ಗೋಪಾಲ ವಾಜಪೇಯಿ, ಜಿ.ಎಚ್. ರಾಘವೇಂದ್ರ, ಜಯತೀರ್ಥ ಜೋಷಿ, ಪಾರ್ಶ್ವನಾಥ್, ಬೆಳಗಾವಿಯ ಶ್ರೀಪತಿ ಮಂಜನ ಬೈಲು, ಕೆ.ಜಿ.ಎಫ್‌ನಲ್ಲಿ ಕನ್ನಡಮಿತ್ರರು, ಸಮುದಾಯ, ರಂಗವರ್ಷ, ಸೃಷ್ಟಿ ಕೊಡವರಂಗ, ಮಂಚಿಗೇರಿ, ಅಂಬಿಕಾನಗರ, ತಿಪಟೂರು, ದಾವಣಗೆರೆ, ತುಮಕೂರು, ಚಿಕ್ಕನಾಯಕನಹಳ್ಳಿ, ಮಂಡ್ಯಾ, ಮಾಲೂರು, ಬೆಂಗಳೂರು ಅಭಿನಯ ತರಂಗ, ಮೈಸೂರಿನ ಸಮತೆಂತೋ, ಮಂಡ್ಯದ ವಿಲಾಸಿ ನಾಟಕ ತಂಡಗಳು, ಬೆಂಗಳೂರು ರೂಪಾಂತರ, ಸರ್ಕಾರಿ ಸಾಮ್ಯದ ಕಾರ್ಖಾನೆಗಳ ಕಲಾತಂಡಗಳು – ಇವರೆಲ್ಲ, ವ್ಯಕ್ತಿ ಹಾಗೂ ಸಂಘಟನೆಯ ನೆಲೆಯಲ್ಲಿ ರಂಗಭೂಮಿ ಮುಂದುವರೆಯಲು ಸಹಾಯಹಸ್ತ ನೀಡಿದ್ದಾರೆ.

ಕೇಳಿಕೆ, ಮೂಡಲಪಾಯ, ಶ್ರೀ ಕೃಷ್ಣಪಾರಿಜಾತ, ರಾಧನಾಟ ಸಣ್ಣಾಟ–ದೊಡ್ಡಾಟ, ಯಕ್ಷಗಾನ ಮೊದಲಾದ ರಂಗ ಪ್ರಕಾರಗಳು ರಾತ್ರಿಯಿಡಿ ಪ್ರಸಂಗಗಳನ್ನು ಪ್ರಸ್ತುತ ಪಡಿಸುವಲ್ಲಿ ಹಿಂದಿನಿಂದಲೂ ಪ್ರಸಿದ್ಧ. ವೃತ್ತಿ ರಂಗಭೂಮಿ ಕೂಡ ಐದಾರು ಗಂಟೆಗಳ ನಾಟಕಗಳನ್ನೇ ಅಣಿಗೊಳಿಸುತ್ತಿದ್ದು, ಹವ್ಯಾಸಿ ರಂಗಭೂಮಿ ಇದನ್ನು ಒಂದೆರಡು ಗಂಟೆಗಳಿಗೆ ಮಿತಿಗೊಳಿಸಿದ್ದು ಈಗ ಇತಿಹಾಸ. ಆದರೆ ದೀರ್ಘಾವಧಿ ನಾಟಕಗಳು (ಮಹಾಭಾರತ) ಈಗ ಪ್ರಯೋಗಗೊಳ್ಳುತ್ತಿದ್ದು ಈ ಗಾಳಿ ಕನ್ನಡ ರಂಗಭೂಮಿಗೂ ಬೀಸಿದೆ.




ಮಗ್ಗದವರು
ಜೆರ್‌ಹಾರ್ಟ್ ಹಾಪ್ಟ್‌ಮನ್‌ನ ದಿ ವೀವರ್ಸ್
ನಾಟಕದ ಕನ್ನಡ ರೂಪ
ಕನ್ನಡ ರೂಪಾಂತರ : ರಾಮಚಂದ್ರದೇವ
ನಿರ್ದೇಶನ : ಊವೇ ಯೆನ್ಸ್ ಯೆನ್‌ಸೆನ್
ವಿನ್ಯಾಸ : ಹೈದೀ ಬ್ರಾಂಬಾಖ್
ಸಂಗೀತ : ಬಿ.ವಿ. ಕಾರಂತ
MAGGADAVARU
GERHART HAUPTMANN'S
THE WEAVERS
IN A KANNADA VERSION
BY RAMACHANDRADEVA.



ಮಲೆಗಳಲ್ಲಿ ಮದುಮಗಳು, ಮನುಷ್ಯಜಾತಿ ತಾನೊಂದೇ ವಲಂ, ಭಾರತ ಭಾಗ್ಯವಿಧಾತ, ಆಧುನಿಕ ತಂತ್ರಕೌಶಲ್ಯ, ಬಹುಮಾಧ್ಯಮ ಉಪಯೋಗ, ನಾನಾ ವೇದಿಕೆಗಳ ಬಳಕೆ, ಧ್ವನಿಸಂಗೀತ, ಗಾಯನ, ಸಂಭಾಷಣೆ ನೃತ್ಯ–ಬೆಳಕು, ಎಲ್ಲವನ್ನು ಸಮರ್ಥವಾಗಿ ಬಳಸಿಕೊಂಡ ಪ್ರದರ್ಶನಗೊಂಡಿವೆ ಸಂಸ್ಕೃತಿ ಇಲಾಖೆ, ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆಗಳು ಈ ಪ್ರಯೋಗಗಳ ಹಿಂದೆ ಕೆಲಸ ಮಾಡಿವೆ.

ಜಿ. ಬಿ. ಜೋಷಿ, ಕಾರ್ನಾಡ್, ಲಂಕೇಶ್, ಕಂಬಾರ, ಶ್ರೀರಂಗ, ಕಿ.ರಂ, ಕೆ.ವಿ. ನಾರಾಯಣ, ಎಚ್.ಎಸ್. ಶಿವಪ್ರಕಾಶ್, ಟಿ.ಎನ್. ಸೀತಾರಾಂ ಮೊದಲಾದ ಆಧುನಿಕ ನಾಟಕಕಾರರು. ಕುವೆಂಪು, ಬೇಂದ್ರೆ, ಮಾಸ್ತಿ, ಶಿವರಾಮ ಕಾರಂತ ರಂತಹ ಸಾಹಿತ್ಯ ಶ್ರೇಷ್ಠರು.  ಹೊಸ ಪೀಳಿಗೆಯ ಲಕ್ಷ್ಮಿಪತಿ ಕೋಲಾರ, ಕೆ. ವೈ. ನಾರಾಯಣಸ್ವಾಮಿ, ಬಿ. ಸುರೇಶ್, ಮೊದಲಾದವರು.  ಬೆಳಕು ವಿನ್ಯಾಸದಲ್ಲಿ ನೈಪುಣ್ಯತೆ ಗಳಿಸಿಕೊಂಡ ವಿ. ರಾಮಮೂರ್ತಿ, ಆರ್. ನಾಗೇಶ್, ಶ್ರೀನಿವಾಸ್, ಜಿ. ಕಪ್ಪಣ್ಣ, ರಂಗ ಸಜ್ಜಿಕೆಯಲ್ಲಿ ಹೊಸತನ ತಂದ ಎಂ. ಎಸ್. ಸತ್ಯು, ಅಸಂಖ್ಯಾತ ನಟನಟಿಯರು, ಸಂಗೀತ ಸಂಯೋಜಕರು ಜೀವಾಳವಾಗಿರುವ ಕನ್ನಡ ರಂಗಭೂಮಿಗೆ ಇದೀಗ ಯುವಗಾಳಿ ಬೀಸಿದೆ. ಉಳ್ಳಾಲ್ ಷೀಲ್ಡ್ ನಂತರ ಕಾಲೇಜು ನಾಟಕ ಸ್ಪರ್ಧೆಗಳಿಂದ ಯುವ ಸಮೂಹಕ್ಕೆ ಕರೆಕೊಟ್ಟ ರಂಗಭೂಮಿ ಇದೀಗ ಯುವ ಸಮುದಾಯ ರಂಗ ಭೂಮಿಯತ್ತ ಆಕರ್ಷಿಸುತ್ತಿದೆ. ಇದಕ್ಕೆ ಸರ್ಕಾರದ ಸಹಾಯಹಸ್ತ. ಸ್ವತಂತ್ರ ಸಾಂಸ್ಕೃತಿಕ ಸಂಘಟನೆಗಳ ಪ್ರೋತ್ಸಾಹ, ಯುವಕರ ಹುಮ್ಮಸ್ಸು, ಎಲ್ಲಾ ಸ್ಥರಗಳಲ್ಲೂ ಕಂಡುಬರುತ್ತಿರುವ ಆಸಕ್ತಿ ಮುಖ್ಯ ಕಾರಣ.

ವಿಶ್ವ ರಂಗಭೂಮಿ ದಿನದ ನೆನಪಿನಲ್ಲಿ ಕನ್ನಡ ರಂಗ ಪರಂಪರೆಯ ಹಾದಿಯನ್ನು ಕಾಣುವ ಹಕ್ಕಿನೋಟ ಇದು.